



ಎತ್ತರದಿಂದ ಧುಮ್ಮಿಕ್ಕುವ ಜಲಪಾತದ ಪಕ್ಕದ ಸೇತುವೆಯ ಮೇಲೆ. ಆ ಸೇತುವೆಯನ್ನು ದಾಟುವಾಗ ಜಲಪಾತದಿಂದ ಸಿಡಿಯುವ ತುಂತುರು ಹನಿಗಳು ನಿಮ್ಮ ಮುಖವನ್ನು ಮುತ್ತಿಕ್ಕುತ್ತವೆ. ಮೈಮೇಲೆಲ್ಲ ಕಚಗುಳಿ ಇಡುತ್ತವೆ. ನಮಗಂತೂ ಸುಮಾರು ಎರಡೂವರೆ ಗಂಟೆಗಳ ಕಾಲ ಕಷ್ಟ ಪಟ್ಟು ಮೇಲೆ ಹತ್ತಿ ಬಂದ ಆಯಾಸವೆಲ್ಲ ಮರೆತು ಹೋಯಿತು. ಜತೆಗೆ ಬೌದ್ಧ ವಿಹಾರಗಳ ಸುತ್ತ ಕಟ್ಟಿರುವ ನೀಲಿ, ಬಿಳಿ, ಕೆಂಪು, ಹಸಿರು, ಹಳದಿ ಬಣ್ಣದಲ್ಲಿ ರಾರಾಜಿಸುತ್ತಿರುವ ಧ್ವಜಗಳು ವಿಶಿಷ್ಟ ಲೋಕವೊಂದನ್ನು ಕಣ್ಣಮುಂದೆ ಕಟ್ಟಿಕೊಡುತ್ತವೆ. ಈ ಧ್ವಜಗಳು ಬುದ್ಧಮತದವರ ಭಕ್ತಿಯ ಸಂಕೇತ. ಇಡೀ ಪ್ರಯಾಣದಲ್ಲಿ ಇನ್ನೊಂದು ಗಮನ ಸೆಳೆಯುವ ಅಂಶವೆಂದರೆ ಬಂಡೆಯ ಕೆಳಗೆ ಇಟ್ಟ ಚಿಕ್ಕ ಚಿಕ್ಕ ಸುಮಾರು ಮೂರಿಂಚು ಎತ್ತರದ ವಸ್ತುಗಳು. ಇವುಗಳು ಕೆಳಗೆ ಸಿಲಿಂಡರಿನ ಆಕಾರವಾಗಿದ್ದು ಮೇಲೆ ತ್ರಿಕೋಣ ಆಕಾರದಲ್ಲಿವೆ. ಹೆಚ್ಚಿನವು ಬಿಳಿ ಅಥವ ಮಣ್ಣಿನ ಬಣ್ಣವಿದ್ದರೆ ಇನ್ನು ಕೆಲವಕ್ಕೆ ಚಿನ್ನದ ಬಣ್ಣ ಬಳಿದಿದ್ದಾರೆ. ಇವುಗಳ ಒಳಗೆ ಸತ್ತವರ ಬೂದಿ ಇದೆಯಂತೆ.
ಇವುಗಳನ್ನು 'ತ್ಸಾ ತ್ಸಾ' ಎಂದು ಕರೆಯುತ್ತಾರೆ.

ಈ ಕಟ್ಟಡದೊಳಗೆ ಎಂಟು ಗುಹೆಗಳು ಹಾಗೂ ನಾಲ್ಕು ಚಿಕ್ಕ ದೇವಾಲಯಗಳಿವೆ. ಪ್ರತೀ ದೇವಾಲಯಕ್ಕೂ ಎತ್ತರದ ಮೆಟ್ಟಿಲುಗಳನ್ನು ಹತ್ತಿಯೇ ಹೋಗಬೇಕು. ದೇವಾಲಯದಲ್ಲಿ ಮೂರ್ತಿಗಳ ಮುಂದೆ ಉರಿಸಿದ ಬೆಣ್ಣೆಯ ದೀಪ, ಊದಿನ ಕಡ್ಡಿ, ನೈವೇದ್ಯಕ್ಕಾಗಿ ಹಲವು ತರಹದ ಹಣ್ಣುಗಳು, ಸುತ್ತಲಿನ ನೀರವತೆ– ನಿಮ್ಮನ್ನು ಮಂಡಿಯೂರಿ ನಮಸ್ಕರಿಸುವಂತೆ ಮಾಡುತ್ತದೆ.

ಭೂತಾನ್ ವಿಶ್ವದ 'ಅತ್ಯಂತ ಸಂತೋಷದ ದೇಶ'ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಮಾರ್ಚ್‌ಏಪ್ರಿಲ್‌ನಲ್ಲಿ ಪ್ರವಾಸ ಹೊರಡುವುದಾದಲ್ಲಿ, ಪಾರೋ ಕಣಿವೆಯಲ್ಲಿ ಗುರು ಪದ್ಮ ಸಂಭವನ ನೆನಪಿನಲ್ಲಿ ನಡೆಯುವ 'ತಿಚು' ಉತ್ಸವದಲ್ಲೂ ಭಾಗವಹಿಸಬಹುದು.